ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ನಾಯನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 11.02.14

ಈ ವಾರದ ಮುನ್ಸೂಚನೆ (ದಿನಾಂಕ 12-02-14 to 16.02.14 ವರೆಗೆ)

ನಿಯತಾಂಕಗಳು	12.02.14	13.02.14	14.02.14	15.02.14	16.02.14
ಮಳೆ (ಮಿ ಮಿ)	0	0	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	32	33	32	33	32
ಕನಿಷ್ಠ ಉಷ್ಣಾಂಶ (ಡಿ.ಸೆ.)	13	14	13	14	13
ಮೋಡ (ಪ್ರಮಾಣ)	2	2	2	4	4
ಅರ್ದ್ರತೆ ೭.೨೦ ಬೆ (ಶೇ)	42	46	44	45	46
ಅರ್ದ್ರತೆ ೨.೨೦ ಮ (ಶೇ)	23	24	26	32	31
ಗಾಳಿಯ ವೇಗ (ಕಿ.ಮಿ/ಗಂಟೆಗೆ)	2	3	3	2	4
ಗಾಳಿಯ ದಿಕ್ಕು (ಡಿಗ್ರಿ)	110	120	130	120	130

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ದಿನಗಳಲ್ಲಿ ಚಿಕ್ಕಬಳ್ಳಾಪುರ ಹಾಗೂ ಸುತ್ತಮುತ್ತ ಒಣಹವೆ ಮುಂದುವರಿಯಲಿದೆ. ದಿನದ ಗರಿಷ್ಠ ಉಷ್ಣಾಂಶವು 32.0-33.0^{o}C ಮತ್ತು ಕನಿಷ್ಠ 13-14°C ಇರಲಿದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ 42-46% ಇದ್ದು, ಮಧ್ಯಾಹ್ನ 23-32% ಇರುವುದು ಮತ್ತು ಗಾಳಿಯು ಈಶಾನ್ಯ ದಿಕ್ಕಿನಿಂದ ಗಂಟೆಗೆ ಸರಾಸರಿ 2-4 ಕಿ.ಮೀ. ವೇಗದಲ್ಲಿ ಶೀತಗಾಳಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಬೆಂಗಳೂರು ಗ್ರಾಮಾಂತರ ಹಳ್ಳಿಗಳಲ್ಲಿ ದನಕರುಗಳಿಗೆ ಕಾಲುಬಾಯಿ ರೋಗ ಕಂಡುಬಂದಿದ್ದು, ಅಗತ್ಯ ಮುನ್ನೆಚ್ಚರಿಕೆ ಕ್ರಮವಹಿಸಿ ಲಸಿಕೆ ಹಾಕಿಸುವುದು ಅತಿ ಅವಶ್ಯಕ.

ಫೆಬ್ರವರಿ ತಿಂಗಳಲ್ಲಿ ಬೆಳೆಯಬಹುದಾದ ತಳಿಗಳು:

ರಾಗಿ: ಇಂಡಾಫ್ಲ್–೫, ಜಿ.ಪಿ.ಯು–26, ಜಿ.ಪಿ.ಯು– 48. **ಸೂರ್ಯಕಾಂತಿ:** ಮಾರ್ಡೆನ್, ಕೆ.ಬಿ.ಎಸ್.ಹೆಚ್–1, ಕೆ.ಬಿ.ಎಸ್.ಹೆಚ್–41, ಕೆ.ಬಿ.ಎಸ್.ಹೆಚ್–42 ಕೆ.ಬಿ.ಎಸ್.ಹೆಚ್–44. **ಅಲಸಂದೆ:** ಸಿ–152. **ಉದ್ದು:** ಟಿ–9, ರಶ್ಮಿ. **ಪಾಪ್ ಕಾರ್ನ್:** ಅಂಬರ್, ಶಕ್ತಿಮಾನ್ ಮುಸುಕಿನ ಜೋಳ: ಗಂಗಾ–11, ನಿತ್ಯಶ್ರೀ.

ವಾತಾವರಣದಲ್ಲಿ ಉಷ್ಣಾಂಶ ಕಡಿಮೆ ಇರುವುದರಿಂದ ದ್ರಾಕ್ಷಿ ಹಾಗೂ ಇನ್ನಿತರ ತರಕಾರಿಗಳಲ್ಲಿ ಕಂದುಬರುವ ಬೂಜು ರೋಗ ಮತ್ತು ಆಲೂಗಡ್ಡೆ ಬೆಳೆಯಲ್ಲಿ ಕಂಡುಬರುವ ಕೊನೆ ಅಂಗಮಾರಿ ರೋಗಗಳ ನುಯಂತ್ರಣಕ್ಕೆ ರಿಡೊಮಿಲ್/**Ridomil** (2 ಗ್ರಾಂ/ಪ್ರತಿ ಲೀಟರ್ ನೀರಿಗೆ) ಅಥವಾ ಮೆಲೊಡಿ ಡಿಯೊ/**Melody Duo** (3 ಮಿ.ಲೀ/ಪ್ರತಿ ಲೀಟರ್ ನೀರಿಗೆ) ಬೆರೆಸಿ ಸಿಂಪಡಿಸುವುದು.

- **ಗುಲಾಬಿ: ಕಪ್ಪು ಚುಕ್ಕೆ ರೋಗ:** ಕಳೆಗಳನ್ನು ತೆಗೆದು ಹಾಕಿ ಹೊಲವನ್ನು ಸ್ವಚ್ಚವಾಗಿಡಿ. ಮೇಲಿಂದ ಮೇಲೆ ಹೆಚ್ಚು ನೀರು ಹಾಯಿಸಬೇಡಿ. ಸಾರಾನಕವನ್ನು ಶಿಫಾರಸ್ಸಿಗಿಂತ ಹೆಚ್ಚು ಬಳಸಬೇಡಿ. ರೋಗ ತೀವ್ರವಾಗಿದ್ದಲ್ಲಿ ಸ್ಕೋರ್/ಅವತಾರ್ (ಡೈಫೆನ್‌ಕೊನಜೋಲ್) ಅಥವಾ ಕವಚ್ (2 ಮಿ.ಲೀ/ಪ್ರತಿ ಲೀಟರ್ ನೀರಿಗೆ) ಅಥವಾ ಅನ್ನು ಸಿಂಪಡಿಸಿ.
- **ಬೂದಿ ರೋಗ** ಹರಡಲು ಇದು ಸೂಕ್ತ ಕಾಲವಾಗಿರುವುದರಿಂದ ಸಲ್ಫೆಕ್ಸ್ (ಗಂಧಕ) ಅನ್ನು ಸಿಂಪಡಿಸಲು ಸೂಚಿಸಲಾಗಿದೆ.
- **ರಸ ಹೀರುವ ಕೀಟಗಳ ನಿಯಂತ್ರಣಕ್ಕೆ Blaze/ಬ್ಲೇಜ್** (1.5-2ಗ್ರಾಂ/ಪ್ರತಿ ಲೀಟರ್ ನೀರಿಗೆ) ಸಿಂಪಡಿಸಿ.

ನೋಡಲ್ ಅಧಿಕಾರಿ:
ಡಾ.ಎಮ್.ಬಿ. ರಾಜೇಗೌಡ
ಬೆಂಗಳೂರು